ಸಾವು ಮತ್ತು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಕ್ಯಾಸನೂರು ಅರಣ್ಯ ಖಾಯಿಲೆ (ಮಂಗನ ಖಾಯಿಲೆ) 1956ರಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಕ್ಯಾಸನೂರಿನಲ್ಲಿ ಮೊಟ್ಟಮೊದಲು ಕಾಣಿಸಿಕೊಂಡಿದ್ದು. ಅಲ್ಲಿಂದ ಶಿವಮೊಗ್ಗ, ಸಾಗರ, ಹೊಸನಗರ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಹಾಗೂ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೂ ಹರಡುತ್ತಾ ಪ್ರತಿ ವರ್ಷವೂ ಈ ಕಾಯಿಲೆಯಿಂದ ಅನೇಕ ಜನರು ತುತ್ತಾಗಿ ಮರಣಗಳು ಸಂಭವಿಸಿದೆ. ಕಳೆದ ಮೂರು ವರ್ಷಗಳಲ್ಲಿ ಈ ಕಾಯಿಲೆಯ ಪರಿಸ್ಥಿತಿಯು ಈ ಕೆಳಕಂಡಂತಿದೆ.

ವರ್ಷ	ಜಿಲ್ಲೆ	ತಾಲ್ಲೂಕು	ರೋಗ ತಗಲಿದವರ ಸಂಖ್ಯೆ	ಕೆ.ಎಫ್.ಡಿ ದೃಢಪಟ್ಟ ರೋಗಿಗಳ ಸಂಖ್ಯೆ	ಮರಣ ಹೊಂದಿದ ಸಂಖ್ಯೆ	ಕೆ.ಎಫ್.ಡಿ. ಎಂದು ದೃಢಪಟ್ಟ ಮರಣದ ಸಂಖ್ಯೆ
1990	ಶಿವಮೊಗ್ಗ	ತೀರ್ಥಹಳ್ಳಿ	1033	321	12	8
		ಹೊಸನಗರ	72	20	–	–
		ಶಿವಮೊಗ್ಗ	18	8	1	1
	ಉತ್ತರಕನ್ನಡ	ಹೊನ್ನಾವರ	166	58	17	–
		ಕುಮುಟ	11	3	–	–
		ಭಟ್ಕಳ	7	2	1	1
		ಅಂಕೋಲ	2	–	–	–
		ಒಟ್ಟು	1809	412	30	10
1991	ಶಿವಮೊಗ್ಗ	ತೀರ್ಥಹಳ್ಳಿ	562	83	1	–
		ಹೊಸನಗರ	111	13	1	–
		ಶಿವಮೊಗ್ಗ	4	2	–	–
		ಸೊರಬ	2	–	–	–
	ಉತ್ತರಕನ್ನಡ	ಭಟ್ಕಳ	117	7	6	4
		ಹೊನ್ನಾವರ	143	29	6	4
		ಸೂಪಾ	20	3	–	–
		ಎಲ್ಲಾಪುರ	5	5	2	1
	ದಕ್ಷಿಣ ಕನ್ನಡ	ಬೆಳ್ತಂಗಡಿ	3	–	–	–
		ಒಟ್ಟು	967	142	16	9

1992	ಶಿವಮೊಗ್ಗ	ತೀರ್ಥಹಳ್ಳಿ	527	95	7	4
		ಹೊಸನಗರ	335	61	–	–
		ಸೊರಬ	5	–	–	–
	ಉತ್ತರಕನ್ನಡ	ಭಟ್ಕಳ	24	1	3	1
		ಹೊನ್ನಾವರ	54	5	1	–
		ಸೂಪಾ	3	–	–	–
		ಎಲ್ಲಾಪುರ	24	6	–	–
		ಕುಮುಟಾ	1	–	–	–
	ಚಿಕ್ಕಮಗಳೂರು	ಕೊಪ್ಪ	210	23	–	–
		ಒಟ್ಟು	1183	191	11	5

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಈ ವರ್ಷ ಅಂದರೆ 1-1-1993 ರಿಂದ 31-3-1993 ರವರೆಗೆ 180 ಪ್ರಕರಣಗಳು ಬಂದಿದ್ದು ಇದರಲ್ಲಿ ಮರಣಗಳಾಗಿವೆ.

1986ರಲ್ಲಿ ಈ ಕಾಯಿಲೆಯ ನಿಯಂತ್ರಣಕ್ಕೆ ಲಸಿಕೆಯನ್ನು ತಯಾರಿಸುವ ಘಟಕವನ್ನು ಶಿವಮೊಗ್ಗದಲ್ಲಿ ಸ್ಥಾಪಿಸಲಾಯಿತು ಮತ್ತು ಕಳೆದ 3 ವರ್ಷಗಳಿಂದ ಈ ಲಸಿಕೆಯನ್ನು ಈ ಕಾಯಿಲೆಯು ಹರಡಿದ್ದ ಜಿಲ್ಲೆಗಳಲ್ಲಿ ಪ್ರಯೋಗಿಸಲಾಗಿದೆ. ಇದರ ವಿವರಗಳು ಈ ಕೆಳಕಂಡಂತಿವೆ.

ವರ್ಷ	ಮೊದಲನೆ ವರಸೆ	ಎರಡನೆ ವರಸೆ
1990-91	51,004	37,622
1991-92	35,336	22,694
1992-93	26,049	18,015

ಈ ಲಸಿಕೆ ಕಾರ್ಯಕ್ರಮವನ್ನು ಪ್ರಾರಂಭಿಸಿದಾಗಿನಿಂದ ಇಲ್ಲಿಯವರೆವಿಗೂ 1,12,379 ಜನರಿಗೆ ಈ ಲಸಿಕೆಯನ್ನು ಕೊಡಲಾಗಿದೆ ಮತ್ತು ಇದರ ಪ್ರಭಾವದಿಂದ ಈ ವರ್ಷ ಅಂದರೆ ಜನವರಿ 1993 ರಿಂದ ಈ ರೋಗವು ಕಳೆದ 2 ವರ್ಷಗಳಿಂದ ಬಹಳ ಕಡಿಮೆಯಾಗಿದೆ.

ವರ್ಷ	ಒಟ್ಟು ಪ್ರಕರಣ	ಮರಣ ಸಂಖ್ಯೆ
1990	1309	81
1991	967	16
1992	1183	11
1993 (31-3-93 ರವರೆಗೆ)	301	3

ಈ ಲಸಿಕೆ ತಯಾರಿಕೆ ಶಿವಮೊಗ್ಗದಲ್ಲಿ ಭರದಿಂದ ಸಾಗಿದ್ದು, ಮಂಗನ ಕಾಯಿಲೆ ನಿಯಂತ್ರಣಕ್ಕೆ ಇದೊಂದು ಅತಿ ಸೂಕ್ತ ಕಾರ್ಯಕ್ರಮವೆಂದು ಹೇಳಬಹುದು.

ಇದಲ್ಲದೆ ಮಂಗನ ಕಾಯಿಲೆ ಹರಡಿರುವ ಪ್ರದೇಶಗಳ ಆಸ್ಪತ್ರೆಗಳಲ್ಲಿ ಈ ರೋಗ ಚಿಕಿತ್ಸೆಗಾಗಿ ಔಷಧಿ ಸಾಮಗ್ರಿಗಳನ್ನು ಒದಗಿಸಲಾಗಿದೆ. ತೀರ್ಥಹಳ್ಳಿ ಸಾರ್ವಜನಿಕ ಆಸ್ಪತ್ರೆ ಮತ್ತು ಸುತ್ತ ಮುತ್ತಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಾದ ಆಗುಂಬೆ, ಕೊಣಂದೂರು, ಮೇಗರವಳ್ಳಿ, ದೇವಂಗಿ, ಅರಳಸುರಳಿ, ಮಂಡಗದ್ದೆ, ಪಡುವರಳ್ಳಿ, ಹಳ್ಳಿಗಳಲ್ಲಿ ರೋಗ ನಿರೋಧಕ ಲಸಿಕೆ ಕೊಡಲು ವ್ಯವಸ್ಥೆ ಮಾಡಲಾಗಿದೆ. ಈ ವರ್ಷ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 13,459 ಜನಕ್ಕೆ ಲಸಿಕೆ ನೀಡಲಾಗಿದೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಒಟ್ಟು 19 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಘಟಕಗಳಲ್ಲಿ 21 ವೈದ್ಯರುಗಳ ಹುದ್ದೆಗಳು ಮಂಜೂರಾಗಿದ್ದು ಈ 9 ಹುದ್ದೆಗಳು ಖಾಲಿ ಇವೆ. ಹಾಗೂ ತೀರ್ಥಹಳ್ಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ 7 ಹುದ್ದೆಗಳು ಮಂಜೂರಾಗಿದ್ದು 4 ಹುದ್ದೆಗಳು ಖಾಲಿ ಇರುತ್ತದೆ. ಈ ಹುದ್ದೆಗಳನ್ನೆಲ್ಲಾ ಸಧ್ಯದಲ್ಲೇ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಹೊಂದಿದ್ದು, ಸದರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಮತ್ತು ಪ್ಯಾರಾ ಮೆಡಿಕಲ್ ಹುದ್ದೆಗಳನ್ನೂ ಕೂಡ ಈ ಸಾಮಾನ್ಯ ವರ್ಗಾವಣೆ ಸಮಯದಲ್ಲಿ ತುಂಬಲಾಗುವುದು.

* ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಈವೊಂದು ಮಂಗನ ಕಾಯಿಲೆಯ ಭೀಕರತೆ ಮಾನ್ಯ ಮಂತ್ರಿಗಳು ಹೇಳಿರತಕ್ಕ ಹೇಳಿಕೆಯಿಂದಲೇ ವ್ಯಕ್ತವಾಗುತ್ತದೆ . 1956ನೇ ಇಸವಿಯಿಂದ ಈ ಕಾಯಿಲೆ ಮಲೆನಾಡು ಪ್ರದೇಶದಲ್ಲಿ ಮಾತ್ರ ಹಬ್ಬಿದೆ. ನಾವೀಗ 1993ನೇ ಇಸವಿಯಲ್ಲಿದ್ದೇವೆ. ಸರಿಸುಮಾರು 40 ವರ್ಷಗಳ ಕಾಲ ಈ ಕಾಯಿಲೆಯನ್ನು ನಾವು ಹತೋಟಿಗೆ ತರುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕಾಗಿ ಬೇಕಾದ ಲಸಿಕೆಗಳಿಗೆ ಪ್ರಯತ್ನ ನಡೆಯಿತು. ಈಗ ಲಸಿಕೆ ಬಂದಿದೆ. ಆದರೆ ಲಸಿಕೆಯನ್ನು ಎರಡು ಸಾರಿ ಹಾಕಬೇಕಾಗುತ್ತದೆ. ಒಂದು ಸಾರಿ ಹಾಕಿದರೆ ಅದು ಪರಿಣಾಮಕಾರಿಯಾಗುವುದಿಲ್ಲ. ನೀವು ಕೊಟ್ಟಿರುವ ವರದಿಯಂತೆ ಮೊದಲನೆಯ ಸಲ ಹಾಕಿದ್ದು 51 ಸಾವಿರ, ಎರಡನೆಯ ಸಲ ಹಾಕಿದ್ದು 37 ಸಾವಿರ. ಹಾಗೆಯೇ ದಾಮಾಷ ಕಡಿಮೆಯಾಗಿದೆ. ಇದು ಒಂದು ಕಾರಣ. ಸರಿಯೋ ತಪ್ಪೋ ನೀವು ಕೊಟ್ಟಿರತಕ್ಕ ವರದಿ ಎಂಬುದು ಮುಖ್ಯವಲ್ಲ. ನಾನು ನಿನ್ನೆ ಎಲ್ಲ ಆಸ್ಪತ್ರೆಗಳನ್ನು ನೋಡಿಕೊಂಡು ಬಂದೆ. ಅಲ್ಲಿರತಕ್ಕ ರೋಗಿಗಳನ್ನು ಮಾತನಾಡಿಸಿಕೊಂಡು ಬಂದೆ. ಸತ್ತಿರುವ ವರ ಸಂಖ್ಯೆ ನೀವು ಕೊಟ್ಟಿರುವಹಾಗೆ ಮೂರಲ್ಲ, ಈಗ ಐದಕ್ಕೆ ಏರಿದೆ. ಆ ವರದಿ ಬರಬಹುದು, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಈಗಾಗಲೇ 5 ಜನ ಸತ್ತಿದ್ದಾರೆ. ಉಳಿದ ಭಾಗದ್ದು ನಾನು ಹೇಳಲಾರೆ. ಸುಮಾರು ತೀರ್ಥಹಳ್ಳಿ ಆಸ್ಪತ್ರೆಯಲ್ಲಿ ಡಾಕ್ಟರು ಕೊಟ್ಟಿರತಕ್ಕ ವರದಿ ಇದು. ಈಗ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ , ವಿವರಗಳನ್ನು ನಾನು ನಿನ್ನೆ ಸಾಯಂಕಾಲ ತೆಗೆದುಕೊಂಡು ಬಂದಿದ್ದೇನೆ. ಚಾಲ್ತಿ ವರ್ಷದಲ್ಲಿ, ಸುಮಾರು 73 ಜನ ಅಲ್ಲಿ ಈಗ ಚಿಕಿತ್ಸೆ ಪಡೆಯುತ್ತಿದ್ದಾರೆ. ತೀರ್ಥಹಳ್ಳಿ ತಾಲ್ಲೂಕಿಗೆ ಅಷ್ಟು ಸೀಮಿತವಾಗಿ ತಾವು ಹೇಳಿದ್ದೀರಿ. ಈ ಕ್ಷೇತ್ರಕ್ಕೆ ಹೊಸನಗರ ತಾಲ್ಲೂಕಿನ ನಗರ ಹೋಬಳಿ ಕೂಡ ಸೇರುತ್ತದೆ. ಅಲ್ಲೂ ಯಡಿಯೂರಿನಲ್ಲಿ ಒಂದು ಆಸ್ಪತ್ರೆಯಿದೆ. ಸಂಪೇಘಟ್ಟದಲ್ಲಿ ಒಂದು ಆಸ್ಪತ್ರೆ ಇದೆ. ಹೀಗೆ ವಿವಿಧ ಭಾಗಗಳಲ್ಲಿ ಆಸ್ಪತ್ರೆಗಳಿವೆ. ಒಂದು ಕಾಯಿಲೆಯನ್ನು ನೀವು ಮೊದಲು ಹೇಳಿದ ಹಾಗೆ prevention is always better than cure. If prevention is not possible what are the steps taken to cure the disease? ಆ ಕ್ಯೂರಿಂಗ್‌ಗೆ ನೀವು ಕೊಟ್ಟಿರತಕ್ಕ ವರದಿ ಏನಿದೆ ಅದರಲ್ಲಿ ನೀವು ಎಷ್ಟು ಜನ ಡಾಕ್ಟರುಗಳ ಹುದ್ದೆ ಖಾಲಿಯಿದೆ ಎನ್ನುವುದನ್ನು ಹೇಳಿದ್ದೀರಿ. ಆಸ್ಪತ್ರೆಗಳಿಗೆ ಔಷಧಿಗಳನ್ನು ಒದಗಿಸುತ್ತೇವೆಂದು ಹೇಳಿದ್ದೀರಿ. ಪ್ರತಿವರ್ಷ ನಾವೇನು ಮಾಡುತ್ತೇವೆ ಎಂದರೆ ಯಾವ ಕಾಯಿಲೆ ಎಲ್ಲಿ ವಿಶೇಷವಾಗಿ ಹಬ್ಬುತ್ತದೋ ಅಲ್ಲಿ ವಿಶೇಷ ಘಟಕಗಳನ್ನು ಪ್ರಾರಂಭ ಮಾಡಿ ಅಲ್ಲಿಗೆ ವಾಹನಗಳನ್ನು ಒದಗಿಸಿ ಅಲ್ಲಿ ವಿಶೇಷವಾದ ಡಾಕ್ಟರುಗಳನ್ನು ನೇಮಕ ಮಾಡುತ್ತೇವೆ. ಈಗ ಈ ಕಾಯಿಲೆ ಬಂದಿರತಕ್ಕ ಪ್ರದೇಶದಲ್ಲಿ ವೈದ್ಯರುಗಳು ಇಲ್ಲ. ಮೂರು ಜನ 20

ಮುಖ್ಯಮಂತ್ರಿಗಳಾದರು. ನಾಲ್ಕಾರು ಜನ ಆರೋಗ್ಯ ಮಂತ್ರಿಗಳಾದರು. ಪ್ರತಿ ಸಾರಿಯೂ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಆರೋಗ್ಯ ಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ವೈದ್ಯಾಧಿಕಾರಿಗಳ ನೇಮಕವಾಗುತ್ತದೆ, ನೇಮಕವಾಗುತ್ತದೆ ಇದೇ ಉತ್ತರ. ಶಾಸನಸಭೆಯಲ್ಲೂ ಇದೇ ಉತ್ತರ. ಶಾಸನಸಭೆಯ ಹೊರಗೂ ಇದೇ ಉತ್ತರ. ಕಟ್ಟಕಡೆಗೆ ಮಾನ್ಯ ವೀರಪ್ಪಮೊಯಿಲಿಯವರಿಗೆ ನಾನು ಖುದ್ದಾಗಿ ಹೋಗಿ ಈ ಅಧಿವೇಶನ ನಡೆಯುವುದಕ್ಕೆ ಮುನ್ನ ಪತ್ರಕೊಟ್ಟು ಹೇಳಿದೆ. ವೈದ್ಯರನ್ನಾದರೂ ನೇಮಕಮಾಡಿ, ಎಲ್ಲಿ ಕಾಯಿಲೆ ಹಬ್ಬಿದೆ ಕನಿಷ್ಟ ಅವರಿಗೆ ನೀವು ಪ್ರಿವೆಂಟ್ ಅಂತೂ ಮಾಡುವುದಕ್ಕಾಗುವುದಿಲ್ಲ ಅದನ್ನು ಕ್ಯೂರ್ ಮಾಡುವುದಕ್ಕೆ ಬೇಕಾದಂತಹ ವೈದ್ಯರುಗಳನ್ನು ನೇಮಕ ಮಾಡಿಯೆಂದು ಕೇಳಿದೆ. ಇದುವರೆಗೆ ನೇಮಕವಾಗಲಿಲ್ಲ. ಮಾನ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನಾನು ಅದಕ್ಕಾಗಿ ಮುಖ್ಯಮಂತ್ರಿಗಳೇ ಬಂದು ಉತ್ತರ ಕೊಡಲಿಯೆಂದು ಕೇಳುವುದಿಲ್ಲ. ನನಗೆ ಕೆಲಸವಾಗಬೇಕು. ಈ ಕಾಯಿಲೆ ಬಂದರೆ 102-103-104 ಡಿಗ್ರಿಯವರೆಗೆ ಜ್ವರ ಬರುತ್ತದೆ. ಜ್ವರ ಬಂದ ತಕ್ಷಣ ಬಾಯಿಂದ ರಕ್ತ ಬರುತ್ತದೆ. ಮನುಷ್ಯ ವೀಕ್ ಆಗುತ್ತಾನೆ. ಆತನಿಗೆ ಟ್ರಿಪ್ ಕೊಡಬೇಕು. ಟ್ರಿಪ್ ಕೊಟ್ಟು ಹಾಗೆಯೇ ಸೀಸೆ ತಗುಲಿಸಿರುತ್ತಾರೆ, ಬಿಚ್ಚುವುದಕ್ಕೆ, ಶುಶ್ರೂಷೆ ಮಾಡುವುದಕ್ಕೆ ಅಲ್ಲಿ ನರ್ಸ್‌ಗಳಿಲ್ಲ. ಡಾಕ್ಟರ್ ಟ್ರಿಪ್ ಹಾಕಿ ಹೋಗಿಬಿಡುತ್ತಾರೆ. ಯಡಿಯೂರಿನಲ್ಲಿ ತಾವು ಇದನ್ನು ವಿಶೇಷವಾಗಿ ಪರಿಗಣಿಸಬೇಕು. ಆದ್ದರಿಂದ ವೈದ್ಯರುಗಳ ನೇಮಕ ಅತ್ಯಂತ ಜರೂರಾಗಿ ಆಗತಕ್ಕದ್ದು ಮುಖ್ಯ. ನೇಮಕ ಮಾಡುತ್ತೇವೆ, ನೇಮಕ ಮಾಡುತ್ತೇವೆಂದು ನಮಗೆ ಹೇಳಬೇಡಿ. ಯಾವಾಗ ಮಾಡುತ್ತೀರಿ? ನೀವೇ ಹೇಳುತ್ತೀರಿ, ತೀರ್ಥಹಳ್ಳಿ ಆಸ್ಪತ್ರೆ ಸುಮಾರು 1920ನೇ ದಶಕದಿಂದ ಕೆಲಸ ಮಾಡುತ್ತಿದೆ. ಕೊಪ್ಪ, ನರಸಿಂಹರಾಜಪುರ, ಶೃಂಗೇರಿ, ತೀರ್ಥಹಳ್ಳಿ, ಹೊಸನಗರ ಈ ನಾಲ್ಕೈದು ತಾಲ್ಲೂಕುಗಳಿಗೆ ಅದು ಪ್ರಮುಖವಾದ ಆಸ್ಪತ್ರೆ. ಲೆಕ್ಕಕ್ಕೆ ಅದು 64 ಹಾಸಿಗೆ ಇರತಕ್ಕ ಆಸ್ಪತ್ರೆ. ಆದರೆ ಈಗ ಹಾಸಿಗೆ ಸಂಖ್ಯೆ ಇರುವುದು 48. ನೂರು ಹಾಸಿಗೆಗೆ ಏರಿಸಿ, ಎಂದು ಹೇಳಿದ್ದೇವೆ. ಹಿಂದೆ ಶ್ರೀಮತಿ ಮನೋರಮ ಮಧ್ವರಾಜ್‌ರವರು ಆರೋಗ್ಯಮಂತ್ರಿಯಾಗಿದ್ದಾಗ ಅವರನ್ನೂ ಜೊತೆಗೆ ಕರೆದುಕೊಂಡು ಹೋಗಿ ನೋಡಿದ್ದೇವೆ. ಎಲ್ಲರೂ ನೋಡಿಕೊಂಡು ಬಂದರು. ಕೊನೆಗೆ ಇಲ್ಲೊಂದು ವಿಶೇಷವಾದ ಕೆ.ಎಫ್.ಡಿ. ವಾರ್ಡ್ ಕಟ್ಟಬೇಕೆಂಬ ತೀರ್ಮಾನಕ್ಕೆ ನಾವು ಬಂದೆವು. ಕನಿಷ್ಟ 20-30 ಬೆಡ್‌ಗಳ ಒಂದು ಸ್ಪೆಶಲ್ ವಾರ್ಡ್ ಮಾಡುವುದು ಇದುವರೆಗೆ ಏನಾಯಿತೋ ಗೊತ್ತಿಲ್ಲ. ಅಲ್ಲೇ ಸ್ಯಾಂಕ್ಷನ್ ಆರ್ಡರ್ ಕೊಟ್ಟಿದ್ದೇವೆ ಎಂದು ಮಂತ್ರಿಗಳು ಹೇಳಿದರು. ಇದನ್ನು ಸ್ಥಳೀಯ ಪತ್ರಿಕೆಗಳೂ ಬರೆದರು. ಅದರ ಪರಿಸ್ಥಿತಿ ಏನಾಯಿತು ಎನ್ನುವುದು ಇದುವರೆಗೂ ಗೊತ್ತಿಲ್ಲ. ಎಷ್ಟೋ ಬಾಂಬ್ ಬಿದ್ದೀತೋ ಏನೋ ಎಂದು ಚರ್ಚೆಯಾಗುತ್ತದೆ. ಆದರೆ ಇದು ವಿಶೇಷವಾದ ಸಂದರ್ಭ ಇದೆ. ಅಲ್ಲಿ ಪ್ರತಿನಿತ್ಯ ಜನ ಸಾಯುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಗಮನಿಸುತ್ತಿಲ್ಲ. ಮಂಗನ ಕಾಯಿಲೆ ಅಂತ ಬರುತ್ತದೆ. ಇದು ನಲ್ವತ್ತು ವರ್ಷಗಳಿಂದ ಇರುವ ಕಾಯಿಲೆ ಪ್ರತಿ ಜನವರಿ, ಫೆಬ್ರವರಿ, ಮಾರ್ಚ್ ಬಂದರೆ ಈ ಕಾಯಿಲೆ ಉಲ್ಬಣಾವಸ್ಥೆಗೆ ಹೋಗುತ್ತದೆ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ, ದಯವಿಟ್ಟು ಎಲ್ಲ ಆಸ್ಪತ್ರೆಗಳಿಗೆ ಡಾಕ್ಟರರ ನೇಮಕಾತಿ ಯಾವಾಗ ಮಾಡುತ್ತೀರಿ? ನೀವೇ ಒಪ್ಪಿಕೊಂಡಿರುವ ಹಾಗೆ, ಒಂಭತ್ತು ಜನ ಡಾಕ್ಟರುಗಳು ಇಲ್ಲ. ಇವರ ನೇಮಕಾತಿ ಯಾವಾಗ ಆಗುತ್ತದೆ? ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ಇನ್ನೊಂದು ವಿಷಯವನ್ನು ತರುತ್ತಿದ್ದೇನೆ. ನೇಮಕ ಮಾಡುವುದಕ್ಕೆ ಏನೆಲ್ಲ ಕಷ್ಟಪಟ್ಟು ಡಾಕ್ಟರುಗಳನ್ನು ಕೆಲವು ಆಸ್ಪತ್ರೆಗಳಿಗೆ ನೇಮಕ ಮಾಡಿಸಿಕೊಂಡು ಹೋಗಿದ್ದೆ. ಅರಳುಸುರಳಿ ಎನ್ನುವಂಥ ಒಂದು ಪ್ರಾಥಮಿಕ ಆರೋಗ್ಯ ಘಟಕಕ್ಕೆ ಒಬ್ಬ ಡಾಕ್ಟರನ್ನು ನೇಮಿಸಿದೆ. ಆದರೆ ಆಗಲೇ ಅವರ ವರ್ಗವಾಯಿತು.

ಶ್ರೀ ಕಾಗೋಡು ತಿಮ್ಮಪ್ಪ : ಅವರನ್ನು ನೀವು ಟ್ರಾನ್ಸ್‌ಫರ್ ಮಾಡಿಸಿದಿರಿ.

ಶ್ರೀ ಡಿ. ಬಿ. ಚಂದ್ರೇಗೌಡ : ಕಾಗೋಡು ತಿಮ್ಮಪ್ಪನವರೇ, ನಾನು ಯಾವ ಡಾಕ್ಟರ್‌ಗೂ ಟ್ರಾನ್ಸ್‌ಫರ್ ಮಾಡಿಸಿಲ್ಲ ಎಂದು ನಿಮಗೆ ಪ್ರಮಾಣಪೂರ್ವಕವಾಗಿ ಈ ಸದನದಲ್ಲಿ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಯಾರ?

ಶ್ರೀ ಡಿ. ಬಿ. ಚಂದ್ರೇಗೌಡ : ನಿಮ್ಮ [illegible] ಯಾರೋ ಮಧ್ಯಸ್ಥಗಾರರು ಮಾಡಿಸಿದ್ದಾರೆ. ನಾನು ಮಾಡಿಸಿದೆ ಎಂಬುದು ಸತ್ಯಕ್ಕೆ ದೂರವಾದ ಮಾತು. ನಾನು ಏನು ಕೇಳುತ್ತಿದ್ದೇನೆ -ಎಂದರೆ, ಯಾವ ಡಾಕ್ಟರು ಬರುವುದಕ್ಕೆ ತಯಾರಾಗಿದ್ದಾರೆ ಅವರ ಹೆಸರು ಕೊಡಿ, ನಾವು ನೇಮಕ ಮಾಡಿಸಿಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಏಕೆಂದರೆ ಪರಿಸ್ಥಿತಿ ಅಂಥ ಒಂದು ಸ್ಥಿತಿಯನ್ನು ತಲುಪಿದೆ. ಅರಳುಸುರುಳಿಗೆ ನೇಮಕವಾಗಿದ್ದ ಡಾಕ್ಟರನ್ನು ಮೊನ್ನೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಅದು ಯಾರು ಮಾಡಿದ್ದಾರೋ ಗೊತ್ತಿಲ್ಲ. ಆಗುಂಬೆಯಲ್ಲಿ ಒಬ್ಬರು ಒಳ್ಳೆಯ ಡಾಕ್ಟರ್ ಇದ್ದರು. ಅವರನ್ನೂ ಟ್ರಾನ್ಸ್‌ಫರ್ ಮಾಡಿಸಿಕೊಂಡು ಹೋದರು. ಕಳೆದ ಎರಡು - ಎರಡೂವರೆ ವರ್ಷದಿಂದ ತೀರ್ಥಹಳ್ಳಿಯಲ್ಲಿ ಒಬ್ಬರೂ ಗೈನಕಾಲಜಿಸ್ಟ್ ಇಲ್ಲ. ಹತ್ತು ಪತ್ರ- ನೂರು ಪತ್ರ ಬರೆದಿದ್ದೇನೆ. ಡೈರೆಕ್ಟರ್ ಅವರಿಗೆ ಟೆಲಿಫೋನ್ ಮಾಡಿದ್ದೇನೆ. ಎಲ್ಲ ಇಲಾಖೆಯವರಿಗೂ ಫೋನ್ ಮಾಡಿದ್ದೇನೆ. ಆದರೂ ಕೂಡ ಒಬ್ಬರನ್ನೂ ಅಲ್ಲಿಗೆ ಹಾಕಿಸಿಲ್ಲ. ಬಡ ಬಸುರಿ ಹೆಂಗಸರು ಖಾಸಗಿ ಆಸ್ಪತ್ರೆಗಳಿಗೆ ಹೋಗಿ ನೂರಾರು ರೂಪಾಯಿ ಕೊಡತಕ್ಕಂಥ ಪರಿಸ್ಥಿತಿ ಇದೆ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ, ಯಾರನ್ನಾದರೂ ಹಾಕಿ. ನಾನು ವಸೂಲಿಬಾಜಿಗೆ ಬಂದು ಈ ಡಾಕ್ಟರನ್ನು ಹಾಕಬೇಡಿ ಎಂದು ಹೇಳಿಲ್ಲ. ಹಾಕಿದ್ದವರು ಯಾರೇ ಇದ್ದರೂ, ಅವರನ್ನು ಸ್ವಾಗತಿಸಿದ್ದೇವೆ. ನೀವೇ ಹೇಳಿದ ಹಾಗೆ If you cannot prevent, please take steps to cure. ಕ್ಯೂರ್ ಎಂದರೆ Strengthen the infrastructure facilities like posting the Doctors.

ಶ್ರೀ ಕಾಗೋಡು ತಿಮ್ಮಪ್ಪ : ನಾಲ್ಕೈದು ವರ್ಷಗಳಿಂದ ಡಾಕ್ಟರ್‌ಗಳು ಬರುತ್ತಾರೆ ಎಂದು ಹೇಳಿ ಸಾಕಾಗಿ ಹೋಗಿದೆ. ನಮ್ಮ ಮಾನ ಮರ್ಯಾದೆ ಹರಾಜು ಎದ್ದುಹೋಗಿದೆ. ನಮಗೆ ಬೇರೆ ಮಾರ್ಗ ಕಾಣುವುದಿಲ್ಲ. ಜಂಟಿ ಕಾರ್ಯಕ್ರಮ ಹಾಕಿದರೆ ಮಾತ್ರ ಸಮಸ್ಯೆ ಬಗೆಹರಿಯಬಹುದು.

ಶ್ರೀ ಕೆ. ಎಸ್. ಈಶ್ವರಪ್ಪ : ಸರ್ಕಾರ ಸಂಪೂರ್ಣ ನಿರ್ಲಕ್ಷ್ಯ ತೋರಿಸಿದೆ. ಅನೇಕ ವರ್ಷಗಳಿಂದ ಈ ಸಮಸ್ಯೆ ಇದೆ. ಮಂಗನ ಕಾಯಿಲೆ ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಹರಡುತ್ತಿದೆ.

ಶ್ರೀ ಡಿ. ಬಿ. ಚಂದ್ರೇಗೌಡ : ಖಾಸಗಿ ನರ್ಸಿಂಗ್ ಹೋಮ್‌ಗಳಲ್ಲಿ ಇರತಕ್ಕಂಥವರ ಸಂಖ್ಯೆ ನಮಗೆ ಸಿಕ್ಕಿಲ್ಲ. ನಿನ್ನೆ ಅಥವಾ ಮೊನ್ನೆ ಮೂರು ಕೇಸುಗಳನ್ನು ಮಣಿಪಾಲ್ ಆಸ್ಪತ್ರೆಗೆ ಕಳಿಸಿಕೊಟ್ಟಿದ್ದಾರೆ. ಏಕೆಂದರೆ ಇಲ್ಲಿ ಡಾಕ್ಟರ್ಸ್ ಇಲ್ಲ. ನೀವು ಹೇಳುತ್ತೀರಿ ಔಷಧಿ ಕಳಿಸುತ್ತೇವೆ ಎಂದು. ಆದರೆ ಔಷಧಿ ಸಹ ಇಲ್ಲ. ಮಾನ್ಯ ಉಪಮುಖ್ಯಮಂತ್ರಿಗಳು ಶಿವಮೊಗ್ಗಕ್ಕೆ ಬಂದಾಗ ಇದನ್ನು ಅವರ ಗಮನಕ್ಕೆ ತಂದು, ಡಿ.ಎಚ್.ಓ. ಅವರನ್ನು ಅದೇ ದಿವಸ ತಾವೇ ಹೋಗಿ ನೋಡಿಕೊಂಡು ಬರಬೇಕೆಂದು ಕಳಿಸಿದ್ದೆ. ಅವರು ನೋಡಿಕೊಂಡು ಬಂದು ವರದಿ ಮಾಡಿದ್ದಾರೆ. ಎರಡನೆಯದು, ಹಿಂದೆ ಸತ್ತವರಿಗೆ ಸರ್ಕಾರದವರು ಪರಿಹಾರ ಕೊಡುತ್ತಿದ್ದರು.

ಜಿಲ್ಲಾ ಪರಿಷತ್ತಿನಿಂದ ಒಂದೊಂದು ಸಾವಿರ ಕೊಡುತ್ತಿದ್ದರು. ಕೊನೆಗೆ ರಾಜ್ಯದ ಮುಖ್ಯಮಂತ್ರಿಗಳ ಪರಿಹಾರನಿಧಿಯಿಂದ ಹತ್ತರಿಂದ ಐದು ಸಾವಿರದವರೆಗೆ ಪರಿಹಾರವನ್ನು ಸತ್ತವರಿಗೆ ಕೊಡುತ್ತಿದ್ದರು. ನಾವು ಈಗ ಪತ್ರ ಬರೆದರೂ ಆ ಪರಿಹಾರ ಬರುವುದಿಲ್ಲ. ಆದ್ದರಿಂದ ದಯಮಾಡಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಅಥವಾ ಬೇರೆ ಯಾವುದಾದರೂ ಮೂಲದಿಂದ ಈ ಕಾಯಿಲೆಯಿಂದ ಸತ್ತವರಿಗೆ ಪರಿಹಾರ ಕೊಡತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕು.

12.15 ಪಿ. ಎಂ.

ಇನ್ನು ಮೂರನೆಯದು, ಕೆ.ಎಫ್.ಡಿ ವಾರ್ಡನ್ನು ತಕ್ಷಣ ಕಟ್ಟುವುದಕ್ಕೆ, ಹಿಂದೆ ಸರ್ಕಾರ ಏನು ಆದೇಶ ಮಾಡಿತ್ತು, ಮಂತ್ರಿಗಳು ಬಂದರು, ಆಶ್ವಾಸನೆ ಕೊಟ್ಟರು ಎಂದರೆ, ಅದು ನಡೆಯುತ್ತದೆ ಎಂಬುದು ನಮ್ಮ ಲೆಕ್ಕ. ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಹೆಲ್ತ್ ಮಿನಿಸ್ಟರಾಗಿದ್ದಾಗ ಅಲ್ಲಿಗೇ ಬಂದು ಮೀಟಿಂಗ್ ಮಾಡಿ ಕೊಟ್ಟಂಥ ಭರವಸೆ ಏನಾಯಿತು? ಮತ್ತೆ ಯಾವಾಗ ಡಾಕ್ಟರುಗಳನ್ನು ಈ ಭಾಗಕ್ಕೆ ಹಾಕುತ್ತೀರಿ. ಅದು ನೋಡಿ ಈಗಾಗಲೇ ಭಟ್ಕಳಕ್ಕೆ ಹೋಗಿದೆ. ಈ ಕಾಯಿಲೆ ಹೇಗೋ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರವಾಸ ಮಾಡುತ್ತದೆ. ಈ ಕಾಯಿಲೆ ಪ್ರವಾಸ ಮಾಡಿದ ಹಾಗೆ ನಾವು ಪ್ರತಿವರ್ಷ ಪ್ರಸ್ತಾಪ ಮಾಡುವುದು. ಇದು ಇವತ್ತು, ನಿನ್ನೆಯದಲ್ಲ, 40 ವರ್ಷಗಳ ಕಾಯಿಲೆ. ನೀವು ಕೊಟ್ಟ ವರದಿ ಸರಿಯಾಗಿದೆ. 1989ನೇ ಇಸವಿಯಲ್ಲಿ 1063 ಜನಕ್ಕೆ ಈ ಕಾಯಿಲೆ ತಗಲಿತ್ತು. ನಾವು ಪಡಬಾರದ ಕಷ್ಟಪಟ್ಟೆವು. ದಯಮಾಡಿ, ಇದನ್ನು ಸ್ವಲ್ಪ ಗಂಭೀರವಾಗಿ ನೀವಾದರೂ ಗಮನಿಸಿ, ವೈದ್ಯರುಗಳನ್ನು ಇನ್ನು 2-3 ದಿವಸದಲ್ಲಿ ಡೆಪ್ಯುಟೇಷನ್ ಮೂಲಕವಾಗಿಯಾದರೂ ಕಳುಹಿಸಿ. ನಿಮಗೆ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಆಗದಿದ್ದರೆ, ಕಾಂಟ್ರಾಕ್ಟ್ಯೋ, ಡೆಪ್ಯುಟೇಷನ್ನೋ, ನೇರವಾದ ಅಪಾಯಿಂಟ್‌ಮೆಂಟೋ, ಹೀಗೆ ಯಾವುದೋ ಒಂದು ರೂಪದಲ್ಲಿ ಕಳುಹಿಸಿಕೊಡತಕ್ಕ ಭರವಸೆ ಕೊಡುತ್ತೀರಾ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಆತಂಕ ಬಹಳ ಸರಿಯಾದಂಥ ಆತಂಕ. ಈಗ ಒಂದೇ ಒಂದು ತೊಂದರೆ ಸರ್ಕಾರಕ್ಕೆ ಇರುವುದೇನೆಂದರೆ, ಕೆಲವು ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ಪೋಸ್ಟ್ ಮಾಡಿದರೆ, ಅವರು ಅಲ್ಲಿಗೆ ಹೋಗುವುದೇ ಇಲ್ಲ. ಅಥವಾ ಏನಾದರೂ ಮಾಡಿ, ಆ ವರ್ಗವನ್ನು ಈ ಮಧ್ಯೆ ವಜಾ ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ : ಮೊನ್ನೆ ತಾನೆ, ಅಲ್ಲಿದ್ದ ಡಾಕ್ಟರೊಬ್ಬರನ್ನೂ ವರ್ಗ ಮಾಡಿದ್ದೀರಿ. I have to make a representation to the Chief Minister and see that it is cancelled. I do not know whether it is cancelled already.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಈ ಸದ್ಯದಲ್ಲಿ ಸರ್ಕಾರದವರು ಗುತ್ತಿಗೆ ಆಧಾರದ ಮೇಲೆ 300 ಜನಕ್ಕಿಂತ ಹೆಚ್ಚಾಗಿ ಡಾಕ್ಟರುಗಳನ್ನು ಆಯ್ಕೆ ಮಾಡಿದ್ದಾರೆ. ಇದು ಮುಖ್ಯಮಂತ್ರಿಗಳ ಕಚೇರಿಗೆ ಬಂದಿದೆ. ಈಗ ನಾವು ಏಪ್ರಿಲ್ ತಿಂಗಳ 5ನೇ ತಾರೀಕಿನಲ್ಲಿದ್ದೇವೆ. ಏಪ್ರಿಲ್ ತಿಂಗಳೊಳಗಾಗಿ.....

ಶ್ರೀ ಕಾಗೋಡು ತಿಮ್ಮಪ್ಪ : ಮಾರ್ಚಿ ತಿಂಗಳ ಅಖೈರಿನೊಳಗಾಗಿ, ಡಾಕ್ಟರುಗಳನ್ನು ಹಾಕುತ್ತೇವೆಂದು ಮುಖ್ಯಮಂತ್ರಿಗಳೇ ನಮಗೆ ಹೇಳಿದ್ದರು. ಈಗ ನೀವು ಏಪ್ರಿಲ್ ತಿಂಗಳು

ಎಂದು ಹೇಳುತ್ತೀರಿ. ಏಕೆ ಈ ರೀತಿ ಹೇಳುತ್ತೀರಿ, ಲಿಸ್ಟ್ ತಯಾರಾಗಿದೆ, ಎಲ್ಲಾ ಆಗಿದೆ, ನಮಗೆ ಪೋಸ್ಟಿಂಗ್ಸ್ ಕೊಡುವುದಕ್ಕೆ ಬರುವುದಿಲ್ಲವೇ? ಏನಾದರೂ ನಮಗೆ ಮಾನ ಮರ್ಯಾದೆ ಇದೆಯೋ ಇಲ್ಲವೋ, ಏಪ್ರಿಲ್ ಎಂದು ಏಕೆ ಹೇಳುತ್ತೀರಿ.

ಶ್ರೀ ಕೆ. ಎಸ್. ಈಶ್ವರಪ್ಪ : ಬಹಳ ನಿಧಾನವಾಗಿ ಉತ್ತರ ಕೊಡುತ್ತಿದ್ದೀರಿ, ಅದಕ್ಕಾಗಿ ಜನ ನಿಧಾನವಾಗಿ ಸಾಯುತ್ತಿದ್ದಾರೆ. ನಿಮ್ಮ ಉತ್ತರ ಹೇಗಿದೆಯೋ ಹಾಗೆಯೇ ಜನ ಸಾಯುತ್ತಿದ್ದಾರೆ. ಈ ತರಹ ಉತ್ತರದಿಂದ ಪ್ರಯೋಜನವಾಗುವುದಿಲ್ಲ. ನೀವು ವಿಧಾನ ಸಭೆಯಲ್ಲಿ ಯಾವ ರೀತಿಯ ಉತ್ತರ ಕೊಡುತ್ತೀರೋ ಅದೇ ರೀತಿ ನೀವು ನಡೆದುಕೊಳ್ಳಿ. ಅಲ್ಲಿ ಜನ ಸಾಯುತ್ತಿದ್ದಾರೆ.

ಶ್ರೀ ಎಂ. ಪಿ. ವೆಂಕಟೇಶ್ : ಈ ಆರೋಗ್ಯ ಖಾತೆಗೆ ಸಚಿವರೇ ಇಲ್ಲ. 2-3 ಜನ ಸಚಿವರು ಉತ್ತರ ಕೊಡುತ್ತಾರೆ.

(ಗೊಂದಲ)

ಅಧ್ಯಕ್ಷರು : ಪೂರ್ತಿಯಾಗಿ ಅವರ ಉತ್ತರವನ್ನು ಕೇಳಿ.

ಶ್ರೀ ಕೆ. ಎಸ್. ಈಶ್ವರಪ್ಪ : ಹಿಂದೆ ಮಾರ್ಚಿ ತಿಂಗಳಲ್ಲಿ ಎಂದು ಹೇಳಿದರು, ಈಗ ಏಪ್ರಿಲ್ ಎಂದು ಹೇಳುತ್ತಾರೆ. ಬರೀ ಇವರ ಉತ್ತರವನ್ನೇ ಕೇಳಿಕೊಂಡು ಹೋಗೋಣವೇ ಅಥವಾ ಪ್ರಾಕ್ಟಿಕಲ್ ಆಗಿ ಏನಾದರೂ ನಡೆಯುತ್ತದೆಯೋ ಗೊತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಎದುರಿಗೇ ಹೇಳಿದ್ದಾರೆ. ಮಾರ್ಚಿ 31ರೊಳಗೆ ಈ ಡಾಕ್ಟರುಗಳನ್ನು ಭರ್ತಿ ಮಾಡುತ್ತೇವೆಂದು ಹೇಳಿರುವುದು ಹೌದೋ ಅಲ್ಲವೋ. ಈಗ ನೀವು ಏಪ್ರಿಲ್ ಎಂದು ಹೇಳುತ್ತಿದ್ದೀರಿ. ಇದಕ್ಕೆ ಏನಾದರೂ ಅರ್ಥವುಂಟೇ. ಇವರು ಉತ್ತರ ಕೊಡುವುದನ್ನು ಕೇಳಿಕೊಂಡು ಹೋಗುವುದಕ್ಕೋಸ್ಕರ ನಾವು ಸದನಕ್ಕೆ ಬರುತ್ತಿದ್ದೇವೆಯೇ? ನಮಗೆ ಬರೀ ಇವರ ಉತ್ತರ ಬೇಕಾಗಿಲ್ಲ, ವೈದ್ಯರುಬೇಕು.

ಶ್ರೀ ವಾಟಾಳ್ ನಾಗರಾಜ್ : ಆರೋಗ್ಯಸಚಿವರು ಯಾರು ಎಂದು ನಮಗೆ ಗೊತ್ತಿಲ್ಲ. ಈ ಸರ್ಕಾರದಲ್ಲಿ ಯಾರಾದರೂ ಆರೋಗ್ಯ ಸಚಿವರು ಇದ್ದಾರೆಯೇ? ಪ್ರತಿಯೊಂದಕ್ಕೂ ನೀವೇ ಉತ್ತರ ಹೇಳುತ್ತಿದ್ದೀರಿ. ತಾವು ಹೇಳಿ ನಮ್ಮದೇನೂ ಅಭ್ಯಂತರವಿಲ್ಲ. ಈ ನಿಮ್ಮ ಹೇಳಿಕೆಯಿಂದ ಅನುಕೂಲವಾಗುವಂತಿದ್ದರೆ ಹೇಳಿ. ಈ ಮಂಗನ ಖಾಯಿಲೆ ಎಷ್ಟು ವರ್ಷದಿಂದ ಇದೆ, ಯಾವ ರೀತಿ ಇದೆ. ಈ ಡಾಕ್ಟರುಗಳ ಬಗ್ಗೆ ಗುರುತರವಾಗಿ ಆಪಾದನೆ ಮಾಡುತ್ತಿದ್ದಾರೆ. ಅಲ್ಲಿ ವೈದ್ಯರಿಲ್ಲವೆಂದು ಹೇಳಿದರೆ, ನಿಮ್ಮ ಹೇಳಿಕೆಯಿಂದ ತೃಪ್ತಿಯಾಗುತ್ತದೆಯೇ, ಪ್ರತಿಯೊಂದಕ್ಕೂ ನೀವೇ ಉತ್ತರ ಹೇಳುತ್ತೀರಾ?

ಶ್ರೀ ಡಿ. ಬಿ. ಚಂದ್ರೇಗೌಡ : ಸರ್ವ ರೋಗಗಳಿಗೂ ಸಿದ್ದೌಷಧ ರಾಮಸ್ವಾಮಿಗಳು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ನಾನು ಪೂರ್ತಿ ಹೇಳುವುದನ್ನು ಕೇಳಿ, ನಿಮಗೆ ಸಮಾಧಾನವಾಗದಿದ್ದರೆ, ಆಮೇಲೆ ಹೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಇಷ್ಟೊಂದು ದೊಡ್ಡ ದೈತ್ಯ ಶಕ್ತಿಯ ಮಂತ್ರಿಮಂಡಲ ಇಟ್ಟುಕೊಂಡಿದ್ದೀರಿ. ಪ್ರತಿಯೊಂದು ಇಲಾಖೆಗೂ ನೀವೇ ಉತ್ತರ ಕೊಡುತ್ತೀರಿ. ನಿಮ್ಮ ಈ ಉತ್ತರದಿಂದ ನಮಗೇನು ತೃಪ್ತಿಯಾಗುವುದಿಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ವೆಂಕಟೇಶ್‌ರವರಿಗೆ ಎಲ್ಲಿದೆ ಮಂಗನಖಾಯಿಲೆ, ನೀವೇಕೆ ಒದ್ದಾಡುತ್ತೀರಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಕಾನೂನು ಮಂತ್ರಿಗಳು ಸ್ವಲ್ಪ ಯಿಲ್ಡ್ ಆಗಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಈ ತಕ್ಷಣ ವೈದ್ಯರನ್ನು ಕಳುಹಿಸಿಕೊಡಬೇಕು. ಅನಂತರ, ಮಂತ್ರಿಗಳು ಯಾರು, ಎಲ್ಲಿಂದ ಬರುತ್ತಾರೆ ಎಂಬುದು ತೀರ್ಮಾನವಾಗಲಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಅಧ್ಯಕ್ಷರೇ, ಈಗ್ಗೆ 5 ದಿವಸದ ಹಿಂದೆ 375 ಜನ ಡಾಕ್ಟರುಗಳನ್ನು ಸರ್ಕಾರದವರು ಆಯ್ಕೆ ಮಾಡಿದ್ದಾರೆ. ಅದು ಮುಖ್ಯಮಂತ್ರಿಗಳ ಹತ್ತಿರ ಬಂದಿದೆ, ಅವರು ಇನ್ನೊಂದು ವಾರದಲ್ಲಿ ಪೋಸ್ಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ, To be on the safer side, ಏಪ್ರಿಲ್ ಒಳಗಾಗಿ ನಿಮಲ್ಲಿಗೆ 80 ಪಿ.ಹೆಚ್.ಯುನಲ್ಲಿ 9 ಖಾಲಿ ಇದೆ, ಜನರಲ್ ಆಸ್ಪತ್ರೆಯಲ್ಲಿ 4 ಖಾಲಿ ಇದೆ ಎಂದು ತಾವು ಹೇಳಿದ್ದೀರಿ. ಅದರಲ್ಲಿ ಬಹುತೇಕ ನೂರಕ್ಕೆ 75 ಭಾಗ ಡಾಕ್ಟರುಗಳನ್ನು ಅಲ್ಲಿಗೆ ಪೋಸ್ಟ್ ಮಾಡಿಸುತ್ತೇವೆ, ಮಾಡದೇಹೋದರೆ, ಈ ಸರ್ಕಾರದಲ್ಲಿ ಯಾರು ಕಾರ್ಯದರ್ಶಿಗಳಾಗಿದ್ದಾರೆ, ಅವರ ಜವಾಬ್ದಾರಿ ಹಿಡಿಯುತ್ತೇವೆ. ನಮ್ಮ ಕಾಗೋಡು ತಿಮ್ಮಪ್ಪನವರು ಬಹಳ ಸಿಟ್ಟಿನಿಂದ ಮಾತನಾಡಿದರು.

ಶ್ರೀ ಕಾಗೋಡು ತಿಮ್ಮಪ್ಪ: ಕಾಲಿಗೆ ಬಿದ್ದೆ, ಗುಮಾಸ್ತರನ್ನು ಸಹಿತ ಹೋಗಿ ನೋಡಿದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ನೀವೂ ಕೂಡ ಸರ್ಕಾರದಲ್ಲಿದ್ದವರು, ತಮಗೂ ಗೊತ್ತಿದೆ. It takes sometime to post Doctors on contract basis. ಆದ್ದರಿಂದ ಸ್ವಲ್ಪ ತಡವಾಗಿದೆ. ಈಗ ಎಲ್ಲವೂ ಆಗಿದೆ. ಇನ್ನು ಪೋಸ್ಟ್ ಮಾಡುವುದಕ್ಕೆ ಯಾವುದೇ ತೊಂದರೆ ಇಲ್ಲ. ಒಂದೇ ಒಂದು ತೊಂದರೆ ಬರಬಹುದಾದದ್ದು ಏನೆಂದರೆ, ನನಗೆ ಕೊಪ್ಪಕ್ಕೆ ಹಾಕಬೇಡಿ, ಶೃಂಗೇರಿಗೆ ಹಾಕಬೇಡಿ, ಬೆಂಗಳೂರು ಸಿಟಿಯಲ್ಲಿಡಿ ಎಂದರೆ ಕಷ್ಟವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನೀವು ವೈದ್ಯರನ್ನು ಹಾಕುವವರೆಗೆ, ಅಲ್ಲಿ ಜನ ಸಾಯುತ್ತಿರಬೇಕೆನ್ನುವುದು ನಿಮ್ಮ ನಿರ್ಧಾರವೇ?

ಶ್ರೀ ಹಾರನಹಳ್ಳಿ ರಾಮಸ್ವಾಮಿ : ನೋಡಿ, 1956ರಿಂದ ಅಲ್ಲಿದ್ದಾರೆ ನೋಡಿ, ನೀವೇಕೆ ಒದ್ದಾಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ವೈದ್ಯರಿಲ್ಲದೇ ಎಲ್ಲರಿಗೂ ಒದ್ದಾಡತಕ್ಕ ಪರಿಸ್ಥಿತಿ ಬಂದಿದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಲಸಿಕೆಯನ್ನು ತಯಾರು ಮಾಡತಕ್ಕ ಕೇಂದ್ರವನ್ನು ಶಿವಮೊಗ್ಗಾದಲ್ಲಿಯೇ ಸ್ಥಾಪನೆ ಮಾಡಿದ್ದಾರೆ. ಬೇಕಾದಷ್ಟು ಔಷಧೋಪಚಾರಗಳಿವೆ. ನಮ್ಮ ಕೊರತೆ ಇರುವುದು ಶ್ರೀಮಾನ್ ಚಂದ್ರೇಗೌಡರು ಹೇಳಿದಹಾಗೆ ಡಾಕ್ಟರುಗಳದ್ದೇ ಕೊರತೆ. ಡಾಕ್ಟರುಗಳ ಕೊರತೆ ಜೊತೆಗೆ, ಅವರ ಆಟಿಟ್ಯೂಡ್ ಕೊರತೆ ಹಳ್ಳಿಗಾಡುಗಳಲ್ಲಿ ಅವರು ಪ್ರೈವೇಟ್ ನರ್ಸಿಂಗ್ ಹೋಂನಿಂದ ಮಣಿಪಾಲ್‌ಗೆ ಕಳುಹಿಸಿದ್ದಾರೆ ಎಂದು ಹೇಳುತ್ತಾ ಇದ್ದರು. ಇದು ಸ್ವಲ್ಪ ಶೋಚನೀಯವಾದಂಥ ಪರಿಸ್ಥಿತಿ. ಇದನ್ನೆಲ್ಲಾ ಬಗೆಹರಿಸುವುದಕ್ಕೆ ಸರ್ಕಾರದವರಿಗೆ ಸ್ವಲ್ಪ ಟೈಮ್ ಕೊಡಿ; ಮಾಡುತ್ತೇವೆ.

ಶ್ರೀ ಡಿ. ಬಿ. ಚಂದ್ರೇಗೌಡ : ಅದರೆ ಕೆ. ಎಫ್. ಡಿ. ವಾರ್ಡ್ ಏನು ಮಾಡುತ್ತೀರಿ. ಅಲ್ಲಿಯೇ ಒಂದು ವಾರ್ಡನ್ನಾದರೂ ಮಾಡಿದರೆ ಅನುಕೂಲವಾಗುತ್ತದೆ. ಆದ್ದರಿಂದ ಈ ವಾರ್ಡ್ ಮಾಡುವುದಕ್ಕೆ ನಿಮಗೆ ಏನು ಕಷ್ಟ. ತೀರ್ಥಹಳ್ಳಿ ಕೇಂದ್ರ ಸ್ಥಳ. ಮಾಜಿ ಆರೋಗ್ಯ ಸಚಿವರ ಮನೆಗೇ ಎಷ್ಟು ಸಾರಿ ಹೋಗಿದ್ದೇನೆಂಬುದನ್ನು ಕೇಳಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಸನ್ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಿಗೆ ವೈದ್ಯರುಗಳನ್ನು ವರ್ಗಮಾಡಿದರೆ ಹೋಗುವುದಿಲ್ಲ ಎನ್ನುವ ಕಾರಣಕ್ಕಾಗಿ, ಗುತ್ತಿಗೆ ಆಧಾರದ ಮೇಲೆ ಡಾಕ್ಟರುಗಳನ್ನು ನೇಮಕ ಮಾಡಬೇಕೆಂದು, ವಿಶೇಷ ಕಾನೂನನ್ನು ಮಾಡುವುದರ ಮೂಲಕ 500 ಜನ ಡಾಕ್ಟರುಗಳನ್ನು ನೇಮಕಾತಿ ಮಾಡುವುದಕ್ಕೆ ನಮ್ಮ ಡಿಪಿಎಆರ್‌ನಿಂದ ಅನುಮತಿ ಸಿಕ್ಕಿತು. ಆರ್ಥಿಕ ಇಲಾಖೆಯವರೂ ಕೂಡ ಇದಕ್ಕೆ ಅನುಮತಿಯನ್ನು ಕೊಟ್ಟರು. ಆಯಾ ಜಿಲ್ಲೆಯ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿರತಕ್ಕ ಡಾಕ್ಟರುಗಳನ್ನು, ಅವರ ಕನ್‌ಸೆಂಟ್ ತೆಗೆದುಕೊಂಡು ಅಲ್ಲಿಗೇ ಪೋಸ್ಟ್ ಮಾಡತಕ್ಕ ಕೆಲಸ ಮಾಡಬೇಕೆಂದು ತೀರ್ಮಾನ ಕೂಡ ಆಯಿತು. ಅದರಂತೆ 320 ಜನ ಡಾಕ್ಟರುಗಳ ಪಟ್ಟಿ ಕೂಡ ತಯಾರಾಯಿತು. 180 ಜನ ಡಾಕ್ಟರುಗಳ ಪಟ್ಟಿಯನ್ನು ಮಾಡುವುದಕ್ಕೆ ಇಷ್ಟು ದಿವಸದ ಸಮಯ ಬೇಕಾಗಿರಲಿಲ್ಲ. ಇದನ್ನು ಆಗಲೇ ಮಾಡಬಹುದಾಗಿತ್ತು. ವೃಥಾ ಕಾಲಾಹರಣ ಮಾಡಿದ್ದಾರೆ; ಇದನ್ನು ಬಗೆಹರಿಸುವುದಕ್ಕೆ 4 ತಿಂಗಳುಗಳ ಕಾಲ ತೆಗೆದುಕೊಂಡಿದ್ದಾರೆಂದರೆ, ಬಹುಶಃ ಗ್ರಾಮಾಣ ಆರೋಗ್ಯದ ಬಗ್ಗೆ ಎಷ್ಟು ನಿರ್ಲಕ್ಷ್ಯತೆ ಇದೆ ಎನ್ನುವುದು ಎದ್ದು ಕಾಣುತ್ತದೆ. ಇದಕ್ಕೆ ಯಾವ ತಾಂತ್ರಿಕ ತೊಂದರೆ ಇಲ್ಲ ; ಕೂಡಲೇ ನೇಮಕಾತಿ ಮಾಡುವುದಕ್ಕೆ ಯಾವ ತೊಂದರೆಯೂ ಇಲ್ಲ. ನಾಳೆಯಿಂದಲೇ ಅವರನ್ನು ಪೋಸ್ಟ್ ಮಾಡುವುದಕ್ಕೆ ಅವಕಾಶ ಇದೆ.

(ಗೊಂದಲ)

ಅಧ್ಯಕ್ಷರು : ಇದರ ಮೇಲೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಮೊದಲು ಅವರು ಹೇಳುವುದನ್ನು ಪೂರ್ತಿಯಾಗಿ ಕೇಳಿ.

ಶ್ರೀ ಕೆ. ಶಿವಮೂರ್ತಿ : ನಮ್ಮಲ್ಲಿ ಕಾಲರಾ ಖಾಯಿಲೆ ಇದೆ. ಅಲ್ಲಿಗೆ ಹಾಕಿರತಕ್ಕ ಡಾಕ್ಟರುಗಳು ಹೋಗಿಲ್ಲ. ಅದಕ್ಕೋಸ್ಕರ ಹೇಳುತ್ತಿದ್ದೇನೆ. ಅಧ್ಯಕ್ಷರೆ ತಾವು ನಮ್ಮ ರಕ್ಷಣೆಗೆ ಬರಬೇಕು. ಈ ಸದನದಲ್ಲಿ ನಾವು ನಿರ್ಧಾರವಾಗಿ, ನಿರ್ದಾಕ್ಷಿಣ್ಯವಾಗಿ, ಸರ್ಕಾರ ನಡೆಸಬೇಕು ಎಂದು ತೀರ್ಮಾನವಾಗಲೇಬೇಕು. ತಾವು ಅಧ್ಯಕ್ಷರಿದ್ದೀರಿ, ಮಾನ್ಯ ಸದಸ್ಯರು ನಮ್ಮ ಅಹವಾಲು ಇಲ್ಲಿ ಏನು ಹೇಳುತ್ತೇವೆಯೋ ಅದು ಸರಿಯಾದ ರೀತಿಯಲ್ಲಿ ಕಾರ್ಯರೂಪಕ್ಕೆ ಬರದೇ ಇದ್ದರೆ, ನಾವು ಇಲ್ಲಿ ಏಕೆ ಬರಬೇಕು. ನಮ್ಮನ್ನು ಯಾರು ಕೇಳುತ್ತಾರೆ, ನಾವು ಏಕೆ ಚುನಾಯಿತ ಪ್ರತಿನಿಧಿಗಳಾಗಬೇಕು ಎಂಬುದು ನನ್ನ ಪ್ರಶ್ನೆ. ಸರ್ಕಾರದಲ್ಲಿ ಕೊರತೆ ಏನಿದೆ.

ಅಧ್ಯಕ್ಷರು : ಅದನ್ನು ಕೇಳುವುದಕ್ಕೂ ಸಮಯ, ಅವಕಾಶ ಇರುತ್ತದೆ. ಈಗ ಮಂಗನಖಾಯಿಲೆ ಬಗ್ಗೆ ಅವರು ವಿಷಯ ಎತ್ತಿದ್ದಾರೆ. ನೀವು ಅವರು ಹೇಳುವುದನ್ನೇ ಕೇಳುತ್ತಿಲ್ಲ. ಅವರು ಏನು ಹೇಳುತ್ತಾರೆಂದು ಪೂರ್ತಿಯಾಗಿ ಕೇಳಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಚಂದ್ರೇಗೌಡರು ಮತ್ತೊಂದು ಪ್ರಶ್ನೆ ಕೇಳಿದರು. ವಾರ್ಡ್ ಕಟ್ಟಿಸುವ ವಿಚಾರದಲ್ಲಿ ಮಂತ್ರಿಗಳೇ ಬಂದು, ಭರವಸೆ ಕೊಟ್ಟಿದ್ದಾರೆ ಎಂದು ಹೇಳಿದರು. ಆ ಭರವಸೆಯನ್ನು ಈ ವರ್ಷ ಅಂದರೆ, 1993-94ರಲ್ಲಿ ಸರ್ಕಾರ ಈಡೇರಿಸುತ್ತದೆ.

ಶ್ರೀ ಕೆ. ಶಿವಮೂರ್ತಿ : ಮಂಗನಖಾಯಿಲೆ ಬಗ್ಗೆ, ಮಾನ್ಯ ಚಂದ್ರೇಗೌಡರು ಪ್ರಸ್ತಾಪ ಮಾಡಿದರು. ಕಾಲರಾ ಬಂದಿರತಕ್ಕ ಪ್ರದೇಶದಲ್ಲಿ ಡಾಕ್ಟರುಗಳನ್ನು ಹಾಕಿದ್ದಾರೆ. ಡಾಕ್ಟರುಗಳು ಡ್ಯೂಟಿ ರಿಪೋರ್ಟ್ ಮಾಡಿಕೊಂಡು, ಅವರು ಡ್ಯೂಟಿಗೇ ಹಾಜರಾಗುತ್ತಿಲ್ಲ. ಇಂತಹ ಡಾಕ್ಟರುಗಳ ಬಗ್ಗೆ ಅವರು ಏನು ಮಾಡುತ್ತಾರೆ, ದಯಮಾಡಿ ಹೇಳಬೇಕು.

ಅಧ್ಯಕ್ಷರು : ಇದರ ಬಗ್ಗೆ ಬೇರೆ ರೂಪದಲ್ಲಿ ಪ್ರಸ್ತಾವನೆ ಕಳುಹಿಸಿಕೊಡಿ.

ಶ್ರೀ ಕೆ. ಶಿವಮೂರ್ತಿ: ಆಯಿತು, ನಾಳೆಯೇ ಕಳುಹಿಸಿಕೊಡುತ್ತೇನೆ.

2. ವಿಷಯ : ದಿನಾಂಕ : 28-2-1993 ರಂದು ಕೆಲವರು ಸೋಮವಾರಪೇಟೆ ಆರಕ್ಷಕ ಠಾಣೆಗೆ ಅಕ್ರಮವಾಗಿ ಪ್ರವೇಶ ಮಾಡಿ ಬಂಧಿತ ಜೂಜುಕೋರರನ್ನು ಬಿಡುಗಡೆ ಮಾಡಬೇಕೆಂದು ಗಲಾಟೆ ಮಾಡಿ ಸರ್ಕಾರದ ಆಸ್ತಿಗೆ ಹಾನಿ ಉಂಟು ಮಾಡಿ ಪಟ್ಟಣದ ಶಾಂತಿಗೆ ಧಕ್ಕೆ ಉಂಟುಮಾಡಿರುವ ಬಗ್ಗೆ.

ಶ್ರೀ ಎ. ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ) : ಮಾನ್ಯ ಅಧ್ಯಕ್ಷರೇ, ದಿನಾಂಕ: 28-2-1993ರಂದು ಕೆಲವರು ಸೋಮವಾರಪೇಟೆ ಆರಕ್ಷಕ ಠಾಣೆಗೆ ಅಕ್ರಮವಾಗಿ ಪ್ರವೇಶ ಮಾಡಿ ಬಂಧಿತ ಜೂಜುಕೋರರನ್ನು ಬಿಡುಗಡೆ ಮಾಡಬೇಕೆಂದು ಗಲಾಟೆ ಮೂಡಿ ಸರ್ಕಾರದ ಆಸ್ತಿಗೆ ಹಾನಿ ಉಂಟು ಮಾಡಿ ಪಟ್ಟಣದ ಶಾಂತಿಗೆ ಧಕ್ಕೆ ಉಂಟುಮಾಡಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

* ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ದಿನಾಂಕ 27-2-1993ರಂದು ರಾತ್ರಿ ಕನ್ಯಾರಹಟ್ಟಿಯಲ್ಲಿ ಜೂಜಾಡುತ್ತಿರುವರೆಂಬ ವರ್ತಮಾನ ಬಂದ ಪ್ರಯುಕ್ತ ಸೋಮವಾರ ಪೇಟೆಯ ಪಿಎಸ್ಐ ಮತ್ತು ಸಿಐಯವರು ಸ್ಥಳಕ್ಕೆ ಧಾವಿಸಿದರು. ಜೂಜಾಡುತ್ತಿದ್ದ ನಾಲ್ಕು ಜನ ಆರೋಪಿಗಳನ್ನು ಬಂಧಿಸಿ ಠಾಣೆಗೆ ಕರೆತಂದು ಅವರ ವಿರುದ್ಧ ಲಘುಪ್ರಕರಣದ ಸಂಖ್ಯೆ 48-93-83 ಕೆಪಿ ಆಕ್ಟ್ ಪ್ರಕಾರ ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ತನಿಖೆಯನ್ನು ಕೈಗೊಂಡರು. ಮರುದಿನ ಬೆಳಿಗ್ಗೆ 28-2-1993ರಂದು ಈ ವಿಷಯ ತಿಳಿದು, ಬಿ.ಡಿ. ಮಂಜುನಾಥ, ತಾಲ್ಲೂಕು ಬಿಜೆಪಿ ಅಧ್ಯಕ್ಷರು - ಸೋಮವಾರಪೇಟೆ - ಇವರು ಅವರ ಅನುಯಾಯಿಗಳೊಂದಿಗೆ ಸುಮಾರು 10-30ಗಂಟೆಗೆ ಪೋಲೀಸ್ ಠಾಣೆಗೆ ಬಂದರು. ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ಪೋಲೀಸ್ ಸಬ್ಇನ್ಸ್ಪೆಕ್ಟರನ್ನು ಮೇಲಿನ ಪ್ರಕರಣಕ್ಕೆ ಸಂಬಂಧಿಸಿದ ಅಪರಾಧಿಗಳಾದ ಡಿ.ಎಸ್. ಸುಂದರ್ ಹಾಗೂ ಇನ್ನೂ

ಮೂರು ಜನರನ್ನು ಬಿಡುಗಡೆ ಮಾಡಲು ಕೋರಿದರು. ಹಾಗೂ ಈ ಪ್ರಕರಣವನ್ನು ಕೈಬಿಡಲು ಸಹ ಕೇಳಿಕೊಂಡರು . ಪಿ.ಎಸ್.ಐ.ಯವರು ಇದಕ್ಕೆ ಒಪ್ಪಲಿಲ್ಲ. ಆದರೆ ಬಂದ ಜನರು ಪಿ.ಎಸ್.ಐ.ಯವರ ಮಾತನ್ನು ಒಪ್ಪದೆ ಅವರ ಜೊತೆ ವಾದ-ವಿವಾದಕ್ಕೆ ಇಳಿದರು. ಈ ವಾದ-ವಿವಾದವು ಅತಿರೇಕಕ್ಕೆ ತಲುಪಿದಾಗ ಪಿಎಸ್ಐ ಅವರು ಅವರನ್ನು ಕೊಪದಿಂದ ಲಾಕ್ಅಪ್ಗೆ ತಳ್ಳಿದರು. ಈ ಘಟನೆಯ ಬಗ್ಗೆ ಹೊರಗಡೆ ಇದ್ದ ಅವರ ಅನುಯಾಯಿಗಳಿಗೆ ವಿಷಯ ತಿಳಿದು ಸುಮಾರು 800 ಜನರು ಗುಂಪು ಸೇರಿ ಠಾಣೆಯ ಮೇಲೆ ಕಲ್ಲುತೂರಾಟ ಪ್ರಾರಂಭಿಸಿದರು. ಈ ಕಲ್ಲು ತೂರಾಟದಲ್ಲಿ ಠಾಣೆಯ ಕಿಟಕಿ ಗಾಜುಗಳು ಒಡೆದು ಠಾಣೆಯ ಫಲಕಕ್ಕೂ ಕೂಡ ಹಾನಿ ಉಂಟಾಯಿತು. ಶನಿವಾರ ಸಂತೆಯಲ್ಲಿದ್ದ ಸಿ.ಪಿ.ಐ ಹಾಗೂ ಹಾರಂಗಿಯಲ್ಲಿದ್ದ ಡಿವೈಎಸ್ಪಿ ಕುಶಾಲನಗರದವರು ವಿಷಯ ತಿಳಿದು ಕೂಡಲೇ ಠಾಣೆಗೆ ಧಾವಿಸಿದರು. ಹಾಗೂ ಉದ್ರಿಕ್ತ ಗುಂಪನ್ನು ಸಮಾಧಾನ ಪಡಿಸುವ ಕಾರ್ಯವನ್ನು ಕೈಗೊಂಡರು. ಅಷ್ಟರಲ್ಲಿ ಪೋಲೀಸ್ ಸೂಪರಿಂಟೆಂಡೆಂಟ್ರವರು ವಿಷಯ ತಿಳಿದು ಅಲ್ಲಿಗೆ ಬಂದರು. ಉದ್ರಿಕ್ತ ಗುಂಪು ಹಿಂಸಾಚಾರಕ್ಕೆ ತಿರುಗುವ ಸಂಭವ ಇದ್ದು ಅವರೆಲ್ಲರೂ ಪಿ.ಎಸ್.ಐ.ಯವರನ್ನೂ ಅಮಾನತ್ತಿನಲ್ಲಿಡಬೇಕೆಂದು ಒತ್ತಾಯಿಸುತ್ತಿದ್ದರು. ಮೇಲ್ನೋಟಕ್ಕೆ ಪಿ.ಎಸ್.ಐಯವರು ಹದ್ದು ಮೀರಿ ನಡೆದಿರುವುದು ಕಂಡುಬಂದಿರುವುದರಿಂದ ಅವರನ್ನು ಅಮಾನತ್ತಿನಲ್ಲಿ ಇಡಲಾಯಿತು. ಉದ್ರಿಕ್ತ ಗುಂಪು ಸಮಾಧಾನಗೊಂಡು ಚದುರಿ ಪರಿಸ್ಥಿತಿ ಹತೋಟಿಗೆ ಬಂತು. ಠಾಣೆಗೆ ಮುತ್ತಿಗೆ ಹಾಕಿ ಕಲ್ಲು ತೂರಾಟ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರಪೇಟೆ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ : 541-93, ಐಪಿಸಿ 143, 147, 148, 427, 353 ಮತ್ತು 149-ಐಪಿಸಿ ಒಂದು ಕೇಸನ್ನು ದಾಖಲು ಮಾಡಿ ದಿನಾಂಕ : 3-3-1993ರಂದು ಬಿ.ಎಂ.ರಾಜು ಮತ್ತು ಇತರ 11 ಜನ ಆರೋಪಿಗಳನ್ನು ದಸ್ತಗಿರಿ ಮಾಡಿ ಸೋಮವಾರಪೇಟೆ ಜೆಎಂಎಫ್ಸಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿ ಆರೋಪಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಶ್ರೀ ಮಲ್ಲೇಶ್, ಪಿಎಸ್ಐಯವರ ಮೇಲಿನ ಪೂರ್ವಭಾವಿ ಇಲಾಖಾ ತನಿಖೆಯನ್ನು ಡಿಎಸ್ಪಿ ಕುಶಾಲನಗರ - ಇವರಿಗೆ ಒಪ್ಪಿಸಿದ್ದು ಪೂರ್ವಭಾವಿ ವಿಚಾರಣೆಯಲ್ಲಿ ಪಿಎಸ್ಐಯವರ ಮೇಲಿನ ಅಪಾದನೆಗಳು ಮೇಲ್ನೋಟಕ್ಕೆ ಸಾಬೀತು ಆಗಿರುವುದು ಕಂಡು ಬಂದಲ್ಲಿ ಅವರ ಮೇಲೆ ಇಲಾಖಾ ವಿಚಾರಣೆ ನಡೆಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಇದೀಗ ಸೋಮವಾರಪೇಟೆ ಠಾಣೆಯ ಸರಹದ್ದಿನಲ್ಲಿ ಪರಿಸ್ಥಿತಿ ಶಾಂತವಾಗಿದೆ.

ಶ್ರೀ ಎ. ಎಂ. ಬೆಳ್ಳಿಯಪ್ಪ : ಮಾನ್ಯ ಅಧ್ಯಕ್ಷರೇ, ಬಹಳ ಬೇಸರದ ಸಂಗತಿ ಅರಿದರೆ, ಈ ಹೇಳಿಕೆಯಲ್ಲಿ ಹೇಳಿರುವಂಥ ಕೆಲವು ವಿವರಗಳು ಸತ್ಯಕ್ಕೆ ದೂರವಾದಂಥ ವಿಷಯಗಳು. ಈ ವಿವರಗಳನ್ನು ಪೋಲೀಸ್ ಅಧಿಕಾರಿಗಳು ಸರ್ಕಾರಕ್ಕೆ ತಿಳಿಸಿದ್ದಾರೆ. ನನ್ನ ಹತ್ತಿರ ಎಸ್ಪಿಯವರು ಸರ್ಕಾರಕ್ಕೆ ಕಳುಹಿಸಿರತಕ್ಕಂಥ ರಿಪೋರ್ಟ್ ಇದೆ. ಅದನ್ನು ಓದಿ ನೋಡುವಾಗ ಈ ಸಬ್ಇನ್ಸ್ಪೆಕ್ಟರ್ ಮಲ್ಲೇಶ್ ಎಂಬವರು ಏನೂ ತಪ್ಪು ಮಾಡಿಲ್ಲ. 21-2-1993 ರಂದು ಅಲ್ಲಿ ಗಲಾಟೆ ನಡೆದಿದ್ದು, 27-2-1993ರ ಮಧ್ಯರಾತ್ರಿ ಈ ಸಬ್ಇನ್ಸ್ಪೆಕ್ಟರ್ ಮತ್ತು ಸರ್ಕಲ್ ಇನ್ಸ್ಪೆಕ್ಟರ್ರವರು ಅಲ್ಲಿಗೆ ಹೋಗಿ, ಸೋಮವಾರ ಪೇಟೆ ಪೋಲೀಸ್ ಸ್ಟೇಶನ್ನಿಂದ ಸುಮಾರು 10 ಕಿ.ಮಿ. ದೂರದಲ್ಲಿ ಒಂದು ಕಡೆ ಜೂಜಾಡುತ್ತಿದ್ದವರನ್ನು ಹಿಡಿದುಕೊಂಡು ಬಂದಿದ್ದಾರೆ. ಅವರ ಮೇಲೆ ಕೇಸ್ ಕೂಡ ದಾಖಲು ಮಾಡಿದ್ದಾರೆ. ಆ ಜೂಜಾಡುತ್ತಿದ್ದವರಲ್ಲಿ ಸುಂದರ ಎಂಬುವನು ಪೋಲೀಸ್ ಇಲಾಖೆಯ ನೇಮಕಾತಿಯಲ್ಲಿ ಸೆಲೆಕ್ಟ ಕೂಡ ಆಗಿದ್ದಾನೆ. ಅಂಥ ಒಬ್ಬ ಮನುಷ್ಯನನ್ನು ಹಿಡಿದುಕೊಂಡು ಬಂದಾಗ ಸೋಮವಾರ ಪೇಟೆಯ ಬಿಜೆಪಿಯ ಅಧ್ಯಕ್ಷ, ಮತ್ತು ಇತರ ಮೂರು ಜನರು ಹೋಗಿ, ಈ ಕೇಸನ್ನು ವಿಥ್ಡ್ರಾ ಮಾಡಬೇಕು, ಡ್ರಾಪ್ ಮಾಡಬೇಕು, ಆ ಅಪರಾಧಿಗಳನ್ನು ಬಿಡುಗಡೆ ಮಾಡಬೇಕೆಂದು ಬಲಾತ್ಕಾರ ಮಾಡುವಂಥ ಸಂದರ್ಭದಲ್ಲಿ ಪೋಲೀಸ್